# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-3138/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 25/01/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಕೆ.ಎಸ್.ಶಿವಲಿಂಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ದಾವಣಗೆರೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಯೋಗೇಶ್ ಬಿನ್ ಗಾಳ್ಯಪ್ಪ, ನಂ.940/2, 6ನೇ ಕ್ರಾಸ್, ಬೇತೂರು ರಸ್ತೆ, ಕೊರಚರ ಕಾಲೋನಿ, ವೆಂಕಟೇಶ್ವರ ಸರ್ಕಲ್, ದಾವಣಗೆರೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ ಶ್ರೀ.ಕೆ.ಎಸ್.ಶಿವಲಿಂಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ದಾವಣಗೆರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಸರ್ಕಾರಿ ನೌಕರಿಗೆ ಸೇರಿ ಸಂಭಾವನೆಗಿಂತ ಹೆಚ್ಚು ಅಕ್ರಮ ಆಸ್ತಿ ಹೊಂದಿರುತ್ತಾರೆ. ಸರ್ಕಾರಿ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡು ಸರ್ಕಾರಿ ಕೆಲಸಗಳಲ್ಲಿ ಅಕ್ರಮವೆಸಗಿ ಸಂಭಾವನೆಗಿಂತ ಹೆಚ್ಚು ಅಕ್ರಮ ಆಸ್ತಿಯನ್ನು ಮಾಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಅರ್ಜಿದಾರರು ಆರೋಪಿಸಿರುವ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರು ತಮ್ಮ ಸರ್ಕಾರಿ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡ ಬಗ್ಗೆ ವಿಚಾರಣಾ ವರದಿ ಹಾಗೂ ಗೌಪ್ಯ ಮಾಹಿತಿಯ ದಾಖಲೆಗಳಲ್ಲಿ ಕಂಡುಬಂದಿರುವುದಿಲ್ಲ. ಆ ಪ್ರಯುಕ್ತ ಸಧ್ಯಕ್ಕೆ ಇದೊಂದು ಉತ್ತಮ ಅಸಮತೋಲನ ಆಸ್ತಿಯ ಪ್ರಕರಣವಾಗಲಾರದು ಎನ್ನುವ ಅಭಿಪ್ರಾಯಕ್ಕೆ ಬರಲಾಗಿದೆ ಎಂದು ಹೇಳಿರುತ್ತಾರೆ.

4) ಪೊಲೀಸ್ ಉಪಾಧೀಕ್ಷಕರು ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಶಿವಮೊಗ್ಗದ ವಿನೋಬಾ ನಗರದಲ್ಲಿ ಒಂದು ನಿವೇಶನ, 3 ಮಹಡಿಗಳ ಮನೆ, ಬೆಂಗಳೂರಿನಲ್ಲಿ ಒಂದು ನಿವೇಶನ ಹಾಗೂ ಅವರ ಪತ್ನಿಯ ಹೆಸರಿನಲ್ಲಿ

ಶಿವಮೊಗ್ಗದಲ್ಲಿ 2 ನಿವೇಶನಗಳನ್ನು ಹೊಂದಿರುವುದು ಕಂಡುಬಂದ ಕಾರಣ, ಸದರಿ ನಿವೇಶನಗಳನ್ನು ಖರೀದಿಸಲು ಮತ್ತು ಮನೆ ನಿರ್ಮಾಣ ಮಾಡಲು ಇಲಾಖಾ ಅನುಮತಿಯನ್ನು ಪಡೆಯಲಾಗಿದೆಯೇ ಎನ್ನುವ ಬಗ್ಗೆ ವಿವರಣೆ ನೀಡುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು.

5) ಎದುರುದಾರರು ತನ್ನ ವಿವರಣೆಯಲ್ಲಿ ವಿಚಾರಣಾ ವರದಿಯಲ್ಲಿ ನಮೂದಿಸಲಾದ ವಿಚಾರಗಳು ಸುಳ್ಳಿನಿಂದ ಕೂಡಿರುತ್ತವೆ. ವಿಚಾರಣಾ ವರದಿಯು ಕೇವಲ ಊಹೆಯಿಂದ ಕೂಡಿರುವುದಾಗಿದೆ. ವಿಚಾರಣಾ ವರದಿಯಲ್ಲಿ ನಮೂದಿಸಲಾಗಿರುವ ಸ್ವತ್ತುಗಳ ಬಗ್ಗೆ ವಿಚಾರಣಾಧಿಕಾರಿಗೆ ತಿಳಿದಿದ್ದರೂ ಸಹ ನಿಜವಾದ ಅಂಶಗಳನ್ನು ಮರೆಮಾಚಲಾಗಿದೆ. ಪ್ರತಿ ವರ್ಷ ಸಲ್ಲಿಸುವ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ವಿವರಣೆಯ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಎದುರುದಾರರು ಖರೀದಿಸಿರುವ ಜಮೀನಿನ ಮಾಲೀಕರ ಜೊತೆ ಯಾವುದೇ ಅಧಿಕೃತ ವ್ಯವಹಾರಗಳು ಇಲ್ಲದೇ ಇರುವ ಕಾರಣ ಸ್ವತ್ತುಗಳನ್ನು ಖರೀದಿಸಲು ಅನುಮತಿಯನ್ನು ಪಡೆದಿರುವುದಿಲ್ಲ. ಆದರೆ, ನಂತರದಲ್ಲಿ ಸರ್ಕಾರಕ್ಕೆ ಮಾಹಿತಿಯನ್ನು ನೀಡಲಾಗಿದೆ. 1982 ರಿಂದ 2016 ರವರೆಗೆ ಬ್ಯಾಂಕಿನಿಂದ ರೂ.10,79,685/– ಸಾಲ ಮತ್ತು ರೂ.11,53,000/– ಕೈ ಸಾಲವನ್ನು ಪಡೆದು ಕೊಂಡಿರುತ್ತಾರೆ. ಆದ್ದರಿಂದ, ವರದಿಯು ಸಮರ್ಪಕವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

6) ವಿಚಾರಣಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರ ಹೆಸರಿನಲ್ಲಿ 3 ನಿವೇಶನಗಳು ಹಾಗೂ ಅವುಗಳ ಪೈಕಿ ಒಂದರಲ್ಲಿ 3 ಮಹಡಿಯ ಮನೆ, ಎದುರುದಾರರ ಪತ್ನಿಯ ಹೆಸರಿನಲ್ಲಿ 2 ನಿವೇಶನಗಳು, ಎದುರುದಾರರ ತಂದೆಯ ಹೆಸರಿನಲ್ಲಿ 7 ಪಿತ್ರಾರ್ಜಿತ ಜಮೀನುಗಳು ಮತ್ತು ಒಂದು ಮನೆ, ಎದುರುದಾರರ ತಮ್ಮನ ಹೆಸರಿನಲ್ಲಿ 5 ಜಮೀನುಗಳು ಇರುವುದು ಕಂಡುಬರುತ್ತದೆ.

7) ತನಿಖಾಧಿಕಾರಿ ತನ್ನ ವರದಿಯ ಜೊತೆ ಕ್ರಯಪತ್ರದ ಪ್ರತಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಪರಿಶೀಲಿಸಿದಾಗ, ದಿ.27/1/2011 ರಲ್ಲಿ ಎದುರುದಾರರು ಶಿವಮೊಗ್ಗ ನಗರದ ವಿನೋಬಾನಗರ ಬಡಾವಣೆಯಲ್ಲಿ ರೂ.13,28,000/–ಕ್ಕೆ ಒಂದು ನಿವೇಶನವನ್ನು ಖರೀದಿಸಿರುವುದು ಕಂಡುಬರುತ್ತದೆ. ದಿ.16/10/1998 ರಲ್ಲಿ ಎದುರುದಾರರು ಶಿವಮೊಗ್ಗ ನಗರದ ಜಯಪ್ರಕಾಶ್ ನಾರಾಯಣ್ ರಸ್ತೆಯಲ್ಲಿ ರೂ.1,96,000/– ಕ್ಕೆ ಒಂದು ನಿವೇಶನವನ್ನು ಖರೀದಿಸಿರುವುದು ಕಂಡುಬರುತ್ತದೆ. ದಿ.2/7/2005 ರಲ್ಲಿ ಎದುರುದಾರರು ರೂ.3,06.014/– ಕ್ಕೆ ಬೆಂಗಳೂರಿನಲ್ಲಿ ಒಂದು ನಿವೇಶನವನ್ನು ಖರೀದಿಸಿರುವುದು ಕಂಡುಬರುತ್ತದೆ. ದಿ.13/9/96 ರಂದು ಎದುರುದಾರರ ಪತ್ನಿ ಯಶೋದರವರ ಹೆಸರಿನಲ್ಲಿ ಶಿವಮೊಗ್ಗದಲ್ಲಿ ತಲಾ ರೂ.16,500/– ರಂತೆ 2 ನಿವೇಶನಗಳನ್ನು ಖರೀದಿ ಮಾಡಿರುವುದು ಕಂಡುಬರುತ್ತದೆ. ಅಲ್ಲದೆ ಎದುರುದಾರರ ತಂದೆಯ ಹೆಸರಿನಲ್ಲಿರುವ ಜಮೀನುಗಳ ಬಗ್ಗೆ ಪಹಣಿ ಪತ್ರಿಕೆಯನ್ನು ಸಹ ಹಾಜರು ಪಡಿಸಿರುತ್ತಾರೆ. ಎದುರುದಾರರ ಸಹೋದರನ ಹೆಸರಿನಲ್ಲಿ ಖರೀದಿಸಿರುವ ಜಮೀನಿನ ಕ್ರಯಪತ್ರದ ಪ್ರತಿಯನ್ನು ಕೂಡ ಹಾಜರು ಪಡಿಸಿರುತ್ತಾರೆ.

8) ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಖರೀದಿದಾರರ ಜೊತೆ ಅವರಿಗೆ ಯಾವುದೇ ಅಧಿಕೃತ ವ್ಯವಹಾರ ಇಲ್ಲದೇ ಇದ್ದ ಕಾರಣ ಇಲಾಖಾ ಅನುಮತಿ ಪಡೆದಿರುವುದಿಲ್ಲವೆಂದು ತಿಳಿಸಿರುವುದಾಗಿದೆ. ಚರ ಮತ್ತು ಸ್ಥಿರಾಸ್ತಿಗಳ ವಿವರಣೆಯನ್ನು ವರ್ಷಾಂತ್ಯಕ್ಕೆ ಇಲಾಖೆಗೆ ನೀಡಿದರೂ ಸಹ ಸ್ವತ್ತುಗಳನ್ನು ಖರೀದಿಸಲು ಮತ್ತು ಮನೆಯನ್ನು ಕಟ್ಟಲು ಯಾವ ಆದಾಯದ ಮೂಲದಿಂದ ಹಣವನ್ನು ಪಡೆದುಕೊಂಡಿರುತ್ತಾರೆನ್ನುವುದನ್ನು ಎದುರುದಾರರು ತನ್ನ ಇಲಾಖೆಗೆ ತಿಳಿಸಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ತನ್ನ ಆಕ್ಷೇಪಣೆಯಲ್ಲಿಯೂ ಸಹ ಜಮೀನು ಹಾಗೂ ಮನೆಯನ್ನು ಕಟ್ಟಲು ಯಾವ ಆದಾಯದಿಂದ ಹಣವನ್ನು ಹೊಂದಿಸಿಕೊಂಡಿರುತ್ತಾರೆನ್ನುವುದನ್ನು ತಿಳಿಸಿರುವುದಿಲ್ಲ. ಅದಲ್ಲದೆ ತನ್ನ ಹೆಂಡತಿಯ ಹೆಸರಿನಲ್ಲಿರುವ ಜಮೀನನ್ನು ಖರೀದಿಸಲು ಯಾವ ಆದಾಯದ ಮೂಲದಿಂದ ಹಣವನ್ನು ಹೊಂದಿಸಲಾಗಿದೆ ಎನ್ನುವುದನ್ನು ಕೂಡ ಎದುರುದಾರರು ನೀಡಿರುವುದಿಲ್ಲ. ತಂದೆಯ ಹೆಸರಿನಲ್ಲಿರುವ ಪಿತ್ರಾರ್ಜಿತ ಜಮೀನುಗಳು ಅವರ ತಂದೆಗೆ ಯಾವ ವರ್ಷದಲ್ಲಿ ಬಂದಿರುತ್ತದೆ ಮತ್ತು ಅವರ ತಂದೆಯವರು ಜಮೀನನ್ನು ಖರೀದಿಸಿದ್ದಲ್ಲಿ ಯಾವ ಆದಾಯದ ಮೂಲದಿಂದ ಅವುಗಳನ್ನು ಖರೀದಿಸಲಾಗಿದೆಯೆನ್ನುವ ಬಗ್ಗೆ ಎದುರುದಾರರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

9) ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಬ್ಯಾಂಕಿನಿಂದ ಸಾಲ ಹಾಗೂ ಕೆಲವರಿಂದ ಕೈಸಾಲವನ್ನು ಪಡೆದಿರುವುದಾಗಿ ತಿಳಿಸಿದ್ದು, ಆ ರೀತಿಯಲ್ಲಿ ಸಾಲ ಪಡೆದ ಬಗ್ಗೆ ಇಲಾಖೆಗೆ ಮಾಹಿತಿ ನೀಡಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಎದುರುದಾರರು ಹಾಜರು ಪಡಿಸಿರುವುದಿಲ್ಲ. ಜಮೀನನ್ನು ಖರೀದಿಸಲು ಮತ್ತು ಮನೆಯನ್ನು ಕಟ್ಟಲು ಯಾವ ಆದಾಯದ ಮೂಲದಿಂದ ಹಣವನ್ನು ಹೊಂದಿಸಿಕೊಂಡಿರುತ್ತಾರೆನ್ನುವುದನ್ನು ಸೂಕ್ತ ರೀತಿಯಲ್ಲಿ ತಿಳಿಸಲು ಎದುರುದಾರರು ವಿಫಲರಾಗಿರುತ್ತಾರೆ. ಆದ್ದರಿಂದ ಅವರು ಹೊಂದಿರುವ ಆದಾಯದ ಬಗ್ಗೆ ಅನುಮಾನ ಉಂಟಾಗುತ್ತದೆ. ಅಲ್ಲದೆ, ಎದುರುದಾರರು ತನ್ನ ಆಕ್ಷೇಪಣೆಯ ಜೊತೆ ಸಲ್ಲಿಸಿರುವ ಬ್ಯಾಂಕ್ ಪುಸ್ತಕದ ಪ್ರತಿಗಳನ್ನು ಪರಿಶೀಲಿಸಿದಾಗ, ಉಳಿತಾಯ ಖಾತೆಯಲ್ಲಿ ಕೆಲವು ಕ್ಯಾಶ್ ಡೆಪಾಸಿಟ್‌ಗಳು ಆಗಿರುವುದು ಕಂಡುಬರುತ್ತದೆ. ಸದರಿ ಹಣ ಯಾವ ಮೂಲದಿಂದ ಬಂದಿರುತ್ತದೆ ಎನ್ನುವ ಬಗ್ಗೆ ಯಾವುದೇ ವಿವರಣೆಯು ಇರುವುದಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರು ತನ್ನ ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿಗಳನ್ನು ಹೊಂದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಮೇಲಿನ ಎಲ್ಲಾ ಅಂಶಗಳನ್ನು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಅಧಿಕಾರ ದುರುಪಯೋಗ ಪಡಿಸಿಕೊಂಡಿಸಿಕೊಂಡು, ಕೆ.ಸಿ.ಎಸ್.ಆರ್.ಸೇವಾ ನಿಯಮಗಳನ್ನು ಉಲ್ಲಂಘನೆ ಮಾಡಿ ಸ್ವತ್ತುಗಳನ್ನು ಖರೀದಿಸುವಾಗ ಇಲಾಖೆಯಿಂದ ಅನುಮತಿ ಪಡೆಯದಿರುವುದರಿಂದ ಅವರು ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

II) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎದುರುದಾರರು ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು **ಭ್ರಷ್ಟಾಚಾರ ನಿಗ್ರಹ ದಳ,** ಇವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 24/1/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.